**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ 1 ನೇ ಎಂ.ಎ.ಸಿ.ಟಿ. ನ್ಯಾಯಾಲಯ, ಕಾರವಾರ</u>**

**ಎಂ.ವಿ.ಸಿ. 263/24**

ಆರ್.ಡಬ್ಲ್ಯು 1

| | | |
|---|---|---|
| ಸಾಕ್ಷಿದಾರರ ಹೆಸರು | - | ಡಾ. ಕೀರ್ತಿ ನಾಯ್ಕ |
| ತಂದೆಯ ಹೆಸರು | - | ನಾಗೇಶ ನಾಯ್ಕ |
| ವಯಸ್ಸು | - | 45 ವರ್ಷ |
| ಉದ್ಯೋಗ | - | ಕನ್ಸಲ್ಟೆಂಟ್ ಕಾರ್ಡಿಯಾಲಿಜಿಸ್ಟ್, ನಾಗಮಂಗಲ ಹೃದಯಾಲಯ |
| ವಾಸ್ತವ್ಯ | - | ಕಾಜುಬಾಗ್, ಕಾರವಾರ ತಾಲೂಕ |

(ಇಂದು ದಿನಾಂಕ 13-06-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಖ್ಯ ವಿಚಾರಣೆ - 2 ನೇ ಎದುರುದಾರರ ಪರ ಶ್ರೀ ಎ.ಜಿ.ಎಚ್. ವಕೀಲರಿಂದಃ</u>**

ನ್ಯಾಯಾಲಯದಿಂದ ಬಂದ ಸಮನ್ಸ್ ಮೇರೆಗೆ ನಾನು ಈ ದಿನ ಗಾಯದ ಪ್ರಮಾಣಪತ್ರದ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಅರ್ಜಿದಾರ ದಿನಾಂಕ 12-02-2022 ರಂದು ರಾತ್ರಿ 8.15 ನಿಮಿಷಕ್ಕೆ ನಮ್ಮ ಆಸ್ಪತ್ರೆಗೆ ದಾಖಲಾಗಿದ್ದು, ಪೊಲೀಸರು ರಾತ್ರಿ 10.00 ಗಂಟೆ ಸಮಾರಿಗೆ ಬಂದು ಅರ್ಜಿದಾರರನ್ನು ವಿಚಾರಿಸಿಕೊಂಡು ಹೋಗಿದ್ದಾರೆ. ನಾವು ನಮ್ಮ ಆಸ್ಪತ್ರೆಯಲ್ಲಿ ಎ.ಎಲ್.ಸಿ. ರಜಿಸ್ಟರನ್ನು ಇಟ್ಟಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ಯಾವುದೇ ಕ್ರಿಮಿನಲ್ ಕೇಸನಲ್ಲಿ ಸಾಕ್ಷಿ ಹೇಳಲು ಸಮನ್ಸ್ ಬಂದಿರುವುದಿಲ್ಲ.

**ಪಾಟೀ ಸವಾಲು -ಅರ್ಜಿದಾರರ ಪರ ಶ್ರೀಮತಿ ಐ.ಎಂ.ಎನ್. ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ 1 ನೇ ಎಂ.ಎ.ಸಿ.ಟಿ. ಕಾರವಾರ